**ಕರ್ನಾಟಕ ಸರ್ಕಾರ**

**ಸಮಗ್ರ ಮಕ್ಕಳ ರಕ್ಷಣಾ ಯೋಜನೆ**

ಸಂ.ಕೆಎಸ್‌ಐಸಿಪಿಎಸ್/ಕೋವಿಡ್-19/54/2020-21

ನಿರ್ದೇಶನಾಲಯ
ಸಮಗ್ರ ಮಕ್ಕಳ ರಕ್ಷಣಾ ಯೋಜನೆ,
ಬೆಂಗಳೂರು, ದಿನಾಂಕ:25.04.2020

ಜಿಲ್ಲಾ ಮಕ್ಕಳ ರಕ್ಷಣಾಧಿಕಾರಿಗಳು
ಜಿಲ್ಲಾ ಮಕ್ಕಳ ರಕ್ಷಣಾ ಘಟಕ,
30 ಜಿಲ್ಲೆಗಳು.

ಮಾನ್ಯರೇ,

ವಿಷಯ: ಕೋವಿಡ್-19ರ ಹಿನ್ನೆಲೆಯಲ್ಲಿ ಸುಪ್ರೀಂ ಕೋರ್ಟ್‌ನ ಆದೇಶಗಳನ್ನು ಕಟ್ಟುನಿಟ್ಟಾಗಿ ಪಾಲಿಸಲು ಪೋಷಕರ ವಶಕ್ಕೆ ನೀಡಲಾದ ಮಕ್ಕಳನ್ನು ಫಾಲೋಅಪ್ ಮಾಡುವ ಬಗ್ಗೆ.

*****

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಕೋವಿಡ್-19 ಹಿನ್ನೆಲೆಯಲ್ಲಿ ರಾಜ್ಯದ ಎಲ್ಲಾ ಜಿಲ್ಲಾ ಮಕ್ಕಳ ರಕ್ಷಣಾ ಘಟಕವು ಈ ಕೆಳಗಿನ ಅಂಶಗಳನ್ನು ತಪ್ಪದೆ ಪಾಲಿಸಬೇಕೆಂದು ಈ ಮೂಲಕ ಸೂಚಿಸಲಾಗಿದೆ.

ಕೋವಿಡ್-19 ಕಾರಣ ಲಾಕ್‌ಡೌನ್ ಘೋಷಣೆಯಾದ ನಂತರ ಸುಪ್ರೀಂ ಕೋರ್ಟ್ ಆದೇಶದ ಮೇರೆಗೆ ಹಲವಾರು ಮಕ್ಕಳನ್ನು ಬಾಲಮಂದಿರ, ಮಕ್ಕಳ ಪಾಲನಾ ಸಂಸ್ಥೆಗಳಿಂದ ಆಯಾ ಪೋಷಕರಿಗೆ ಒಪ್ಪಿಸಲಾಗಿದೆ. ಹೀಗಿ ಒಪ್ಪಿಸಲಾದ ಮಗು/ಮಕ್ಕಳು ಕುಟುಂಬದ ವಾತಾವರಣಕ್ಕೆ ಹೊಂದಿಕೊಂಡಿದ್ದಾರೆಯೇ ಎಂಬುದನ್ನು ತಿಳಿದುಕೊಳ್ಳುವುದು ಅತ್ಯಗತ್ಯವಾಗಿದೆ.

1) ಮಕ್ಕಳ ಪಾಲನಾ ಸಂಸ್ಥೆಗಳ ಆಪ್ತ ಸಮಾಲೋಚಕರು ಮಕ್ಕಳ ಮನೆಯವರಿಗೆ ಕನಿಷ್ಠ ವಾರಕ್ಕೆ 2 ಬಾರಿಯಾದರೂ ದೂರವಾಣಿ ಮೂಲಕ ಸಂಪರ್ಕಿಸಿ ಮಗುವಿಗೆ ಮನೆಯಲ್ಲಿ ಪೂರಕ ವಾತಾವರಣವಿರುವುದರ ಬಗ್ಗೆ ಕಡ್ಡಾಯವಾಗಿ ಹಾಗೂ ನಿಯಮಿತವಾಗಿ ಮಾಹಿತಿ ಪಡೆಯತಕ್ಕದ್ದು. ಹಾಗೂ ಈ ರೀತಿ ನಿಯಮಿತವಾಗಿ ಮಗುವಿನ ಕುಟುಂಬದವರೊಂದಿಗೆ ಮಾತನಾಡಿದ ಬಗ್ಗೆ ನಿಗದಿತ ವಹಿಯಲ್ಲಿ(ಮಾದರಿ ವಹಿ ಅನುಬಂಧದಲ್ಲಿ ಒದಗಿಸಲಾಗಿದೆ) ನಮೂದಿಸತಕ್ಕದ್ದು.

2) ತುರ್ತು ಸಂದರ್ಭಗಳಲ್ಲಿ ಮಗು ಹಾಗೂ ಮಕ್ಕಳ ಕುಟುಂಬದವರು ಸಂಪರ್ಕಿಸಬಹುದಾದ ದೂರವಾಣಿ ಸಂಖ್ಯೆಯನ್ನು ಕಡ್ಡಾಯವಾಗಿ ಅವರಿಗೆ ಒದಗಿಸಬೇಕೆಂದು ಹಾಗೂ ಸದರಿ ದೂರವಾಣಿ ಸಂಖ್ಯೆಗೆ ಕರೆ ಮಾಡಲು ಅರಿವು ಮೂಡಿಸಲೂ ಸಹ ಸೂಚಿಸತಕ್ಕದ್ದು.

3) ಮಕ್ಕಳ ಪಾಲನಾ ಸಂಸ್ಥೆಯಿಂದ ಅಥವಾ ಜಿಲ್ಲಾ ಮಕ್ಕಳ ರಕ್ಷಣಾ ಘಟಕದಿಂದ ಮಗು ಮತ್ತು ಮಗುವಿನ ಕುಟುಂಬದ ಸದಸ್ಯರಿಗೆ ದೂರವಾಣಿ ಕರೆ ಮಾಡಿದಾಗ ಮಗುವಿನ ಅಥವಾ ಮಗುವಿನ ಪೋಷಕರಿಗೆ ಕೌನ್ಸಿಲಿಂಗ್ ಅವಶ್ಯಕತೆ ಇದೆ ಎಂದು ಕಂಡುಬಂದಲ್ಲಿ ತಕ್ಷಣ ವಿವರವಾದ ಕೌನ್ಸಿಲಿಂಗ್ ಒದಗಿಸುವುದು. ಒಂದು ವೇಳೆ ಅವಶ್ಯವಿದ್ದಲ್ಲಿ ಆರೋಗ್ಯ ಇಲಾಖೆಯಿಂದ ಮಾನಸಿಕ ತಜ್ಞರ ಸಹಾಯವನ್ನು ಪಡೆಯುವುದು. ಈ ರೀತಿ ಮಗುವಿಗೆ ಮನೆಯಲ್ಲಿ ಆಹ್ಲಾದಕರ ವಾತಾವರಣ ಇರುವಂತೆ ನೋಡಿಕೊಳ್ಳುವುದು.

4) ಒಂದು ವೇಳೆ ಮಕ್ಕಳಿಗೆ ಅಥವಾ ಪೋಷಕರು, ಕುಟುಂಬದ ಸದಸ್ಯರಿಗೆ ಮುಖತ: ವೈಯಕ್ತಿಕ ಕೌನ್ಸಿಲಿಂಗ್ ಅವಶ್ಯವಿದ್ದಲ್ಲಿ ಸಕಾಲದಲ್ಲಿ ಅವರ ವಿಳಾಸಕ್ಕೆ ಹತ್ತಿರವಿರುವ ಸಂಪನ್ಮೂಲ ಸಮಾಲೋಚಕರುಗಳಿಂದ ಅವಶ್ಯಕ ಕೌನ್ಸಿಲಿಂಗ್ ನೀಡಲು ಅನುವಾಗುವಂತೆ ಜಿಲ್ಲಾ ಮಕ್ಕಳ ರಕ್ಷಣಾ ಘಟಕದ ನಿಗದಿತ ನಮೂನೆಯಲ್ಲಿ ಮಕ್ಕಳ ಕುಟುಂಬದ ವಿಳಾಸವನ್ನು ನಿರ್ವಹಿಸುವುದು ಹಾಗೂ ಜಿಲ್ಲೆಯಲ್ಲಿ ಇಲಾಖೆಗೆ ಲಭ್ಯವಿರತಕ್ಕಂತಹ ಎಲ್ಲಾ ಕೌನ್ಸಿಲರ್‌ಗಳ ಕಾಂಟ್ಯಾಕ್ಟ್ ನಂಬರ್ ಹಾಗೂ ವಿಳಾಸವನ್ನು ಸಹ ಜಿಲ್ಲಾ ಮಕ್ಕಳ ರಕ್ಷಣಾ ಘಟಕದಲ್ಲಿ ನಿರ್ವಹಿಸುವುದು.

ಮೇಲಿನಂತೆ ನಿಯಮಿತವಾಗಿ ಪೋಷಕರ ವಶಕ್ಕೆ ನೀಡಲಾದ ಮಕ್ಕಳ ಅನುಸರಣೆಯನ್ನು ಮಾಡುತ್ತಿರುವ ಬಗ್ಗೆ ಹಾಗೂ ಮಕ್ಕಳಿಗೆ ಮತ್ತು ಮಕ್ಕಳ ಪೋಷಕರಿಗೆ ಅವಶ್ಯಕ ಸಮಾಲೋಚನೆ ನೀಡುತ್ತಿರುವುದರ ಬಗ್ಗೆ ಲಗತ್ತಿಸಿದ ನಮೂನೆಯಲ್ಲಿ ಕೇಂದ್ರ ಕಛೇರಿಗೆ ವಾರಕ್ಕೊಮ್ಮೆ ವರದಿ ಸಲ್ಲಿಸುವಂತೆ ಸೂಚಿಸಲಾಗಿದೆ.

ತಮ್ಮ ವಿಶ್ವಾಸಿ,

25.04.2020

ನಿರ್ದೇಶಕರು,
ಸಮಗ್ರ ಮಕ್ಕಳ ರಕ್ಷಣಾ ಯೋಜನೆ,
ಬೆಂಗಳೂರು.